Loss of Rs. 30,000 at Government Silk Filature, Kollegal due to Rat Menace

588. Sri C. R. RANGE GOWDA (Magadi).—

Will the Minister for Agriculture be pleased to state.—

(*a*) whether loss to the extent of nearly Rs. 30,000 (thirty thousand rupees) has been incurred by the Government Silk Filature, Kollegal due to Rat Menace ;

(*b*) whether the same has been intimated to the Public Accounts Committee ;

(*c*) whether the Director of Vigilance has been appointed as an Enquiry Officer in the matter in January 1965 ;

(*d*) if so, the findings of the enquiry ;

(*e*) the action taken upon the concerned for the loss to the Government ?

Sri B. RACHAIAH (Minister for Agriculture).—

(*a*), (*b*) and (*c*) Yes.

(*d*) The findings are of a confidential nature.

(*e*) The finding of the Enquiry Officer is for consideration.

ಶ್ರೀ ಸಿ. ಆರ್. ರಂಗೇಗೌಡ.—ಇಲಿಗಳ ಹಾವಳಿಯಿಂದ ಕೊಳ್ಳೇಗಾಲದ ಸರ್ಕಾರಿ ಸಿಲ್ಕ್ ಫಿಲೇಚರಿನಲ್ಲಿ ಸುಮಾರು 30 ಸಾವಿರ ರೂಪಾಯಿಗಳಷ್ಟಕ್ಕೆ ನಷ್ಟವಾಗಿದೆಯೆಂದು ತಿಳಿಸಲಾಗಿದೆ. ಆದರೆ ಎನ್‌ಕ್ವೈರಿ ವಿಚಾರ ಕಾನ್‌ಫಿಡೆನ್‌ಷಿಯಲ್ ಎಂದು ಹೇಳಲಾಗಿದೆ. ಸಣ್ಣ ಪುಟ್ಟ ಅಧಿಕಾರಿಗಳು ದುರುಪಯೋಗ ಮಾಡಿದರೆ ಅದು ಕಾನ್‌ಫಿಡೆನ್‌ಷಿಯಲ್ ಅಲ್ಲ, ದೊಡ್ಡ ಅಧಿಕಾರಿಗಳು ದುರುಪಯೋಗ ಮಾಡಿದರೆ ಅದು ಕಾನ್‌ಫಿಡೆನ್‌ಷಿಯಲ್ ಎಂದು ಹೇಳುವುದು ರೂಢಿಯಲ್ಲಿದೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಇದನ್ನು ಬಹಿರಂಗಪಡಿಸಬಾರದು ಎಂದು ಇಟ್ಟುಕೊಂಡಿದ್ದೆವು. ಈಗ ದೊಡ್ಡವರ ಮೇಲೆ ಎನ್‌ಕ್ವೈರಿ ಮಾಡುತ್ತಾ ಇರುವುದು.

ಶ್ರೀ ಸಿ. ಆರ್. ರಂಗೇಗೌಡ.—1965ರಲ್ಲಿ ಒನ್‌ಮ್ಯಾನ್ ಎಜಿಲೆನ್ಸ್ ಕಮಿಷನ್ ನೇಮಕ ಮಾಡಿ ಎನ್‌ಕ್ವೈರಿ ಆಯಿತು, ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ತಯಾರಾಯಿತು. ಅದಾದ ಮೇಲೆ ಇಂತಹ ಒಂದು ದುರುಪಯೋಗದ ಅಥವಾ ಅಶ್ರದ್ಧೆಯಿಂದಾದ ವ್ಯವಹಾರಗಳಿಗೆ ಇಂತಿಷ್ಟೆ ಕಾಲದಲ್ಲಿ ಕಾರ್ಯಕ್ರಮ ಕೈಗೊಂಡರೆ ಮಾತ್ರ ಕಾನೂನು ಬದ್ಧವಾಗಿರುತ್ತದೆ. ಇಲ್ಲದೇ ಇದ್ದರೆ ಕಾರ್ಯಕ್ರಮ ಕೈಕೊಳ್ಳುವುದಕ್ಕಾಗುವುದಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

Sri B. RACHAIAH.—The whole report is under the consideration of the Government.

ಶ್ರೀ ಸಿ. ಆರ್. ರಂಗೇಗೌಡ.—ನಾನು ಕೇಳುತ್ತಾ ಇರುವುದು ಇಂತಿಷ್ಟೇ ಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಲಿಮಿಟೇಷನ್ ಆಫ್ ಟೈಂ ಇಲ್ಲವೇ ? ಇದನ್ನು ಕಾರ್ಯರೂಪಕ್ಕೆ ತರಲು ಆ ಲಿಮಿಟೇಷನ್ ಅಡ್ಡಿ ಬರುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಅದೇನೂ ಆಗುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಫೈಂಡಿಂಗ್ಸ್ ಕಾನ್‌ಫಿಡೆನ್‌ಷಿಯಲ್ ಅಂತ ಹೇಳಿದ್ದೀರಿ. ಇದು ನಿಜವಾಗಿಯೂ ಇಲಿಗಳು ತಿಂದು ಹಾಕಿರುವುದೇ ಅಥವಾ ಎರಡು ಕಾಲನ ಇಲಿಗಳು ಅಥವಾ ಹೆಗ್ಗಣದ ಕೆಲಸವೇ ಆದ್ದರಿಂದ ಕಾನ್‌ಫಿಡೆನ್‌ಷಿಯಲ್ ಅಂತ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇಲಗಳು ತಿಂದುಹಾಕಿವೆ. ತಿಂದು ಹಾಕುವುದಕ್ಕೆ ಯಾರು ಕಾರಣ ಕರ್ತರು ? ಯಾರು ನಗ್ಲೆಕ್ಟ್ ಮಾಡಿದರು, ರ್ಯಾಟ್ ಪ್ರೂಫ್ ಗೋಡೌನ್ ಏಕೆ ಕಟ್ಟಲಲ್ಲ ಈ ಎಲ್ಲಾ ಕಾರಣಗಳು ಇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಇಲಗಳು ತಿಂದದ್ದು ತಮ್ಮ ಗಮನಕ್ಕೆ ಬಂದ ತಕ್ಷಣ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿರಿ ?

ಶ್ರೀ ಬಿ. ರಾಚಯ್ಯ.—1956ರಲ್ಲಿ 1,442 ರೂಪಾಯಿ 44 ಪೈಸೆ ಅಷ್ಟು ರೈಟ್ ಆಫ್ ಮಾಡಬೇಕೆಂದು ಆಡಿಟ್ ರಿಪೋರ್ಟಿನಲ್ಲಿ ಮೊದಲನೆಯ ಸಾರಿ ನನ್ನ ಗಮನಕ್ಕೆ ಬಂತು. ಇಲಗಳು ಅಷ್ಟು ಮೊತ್ತದ ಗೂಡುಗಳನ್ನು ತಿಂದು ಹಾಕಿವೆ ಎಂಬುದು ಗೊತ್ತಾದಮೇಲೆ 1960ರಲ್ಲಿ ಅದಕ್ಕೆ ಒಂದು ರ್ಯಾಟ್ ಪ್ರೂಫ್ ಗೋಡೌನ್ ಕಟ್ಟಬೇಕೆಂದು ಸರ್ಕಾರದವರು ಆರ್ಡರ್ ಮಾಡಿದರು. ಆರ್ಡರ್ ಮಾಡಿದ್ದರೂ ಸಹ ಅದು ಬೇಕಾಗಿಲ್ಲ ಇನ್ನೊಂದು ಕಡೆ ಗೋಡೌನ್ ಇದೆ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಅಂತ ಡೈರೆಕ್ಟರು ಸರ್ಕಾರಕ್ಕೆ ಬರೆದರು. ಆದ್ದರಿಂದ ಗೋಡೌನ್ ಕಟ್ಟಿಸಲಲ್ಲ, ಇದು ಒಂದು ಕಾರಣ, ಇನ್ನೊಂದು ಕಾರಣ, ಅವರು ಮಾಂಬಳ್ಳಿಯಲ್ಲರತಕ್ಕ ಗೋಡೌನ್ ಉಪಯೋಗಿಸಿಕೊಳ್ಳುತ್ತೇವೆ ಎಂದು ಹೇಳಿದ್ದು ಅದನ್ನು ಉಪಯೋಗಿಸಿಕೊಳ್ಳದೆ ಹಾಗೆಯೇ ಇದ್ದದ್ದು, ಈ ಎಲ್ಲಾ ಕಾರಣಗಳಿಂದ ಅವರಮೇಲೆ ಚಾರ್ಜ್‌ಷೀಟ್ ಹಾಕಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಫಿಲೇಚರ್ಸ್‌ನಿಂದ ವರ್ಷೆವರ್ಷೇ ಲಕ್ಷಗಟ್ಟಲೆ ಹಣ ನಷ್ಟವಾಗುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಅದನ್ನು ಸದಸ್ಯರೆಲ್ಲರೂ ತಿಳಿಸಿದ್ದಾರೆ. ಕೆಲವಾರು ಸಾರಿ ಈ ನಷ್ಟ ಬಹಳವಾಗಿ, ಈ ಕೈಗಾರಿಕೆಯೇ ಹೀನಸ್ಥಿತಿಗೆ ಬಂದಿದೆ. ಆದ್ದರಿಂದ ತಾವು ಕೂಡಲೇ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಅಗತ್ಯವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದೀರಾ ?

ಶ್ರೀ ಬಿ. ರಾಚಯ್ಯ.—ಯಾವ ಡೈರೆಕ್ಟರು ಈ ಒಂದು ನಷ್ಟಕ್ಕೆ ಕಾರಣರಾಗಿದ್ದಾರೋ ಅವರಿಂದ ಆ ಫಿಲೇಚರ್ ಯೂನಿಟನ್ನು ತೆಗೆದುಕೊಂಡು 1965ನೇ ಇಸವಿಯಿಂದ ಅದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. 1965ರಿಂದ ಈಚೆಗೆ ಇಲಗಳಿಂದ ತಿಂದ ಗೂಡುಗಳು ಯಾವುದೂ ಇಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಇಲಗಳ ಹಾವಳಿಯನ್ನು 1956ರಲ್ಲಿ ತಾವು ನೋಟೀಸ್ ಮಾಡಿದಿರಿ, ವಿಜಿಲೆನ್ಸ್ ಕಮಿಷನ್ ಎನ್‌ಕ್ವೈರಿ ಮಾಡಿದ್ದು 1965ರಲ್ಲಿ. ಈ ಮಧ್ಯದಲ್ಲಿ ಸುಮಾರು 28 ಸಾವಿರ ರೂಪಾಯಿಗಳನ್ನು ಯಾವ ಇಲಗಳು ತಿಂದವು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಇಷ್ಟು ಟೈಂ ರ್ಯಾಗ್ ಆಗುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ.—ಅದನ್ನು ಹೇಳುವುದಕ್ಕಾಗುವುದಿಲ್ಲ, ಆಡಿಟ್ ರಿಪೋರ್ಟ್ ನನ್ನ ಗಮನಕ್ಕೆ ಬಂದಮೇಲೆ ಎನ್‌ಕ್ವೈರಿ ಮಾಡುವುದಕ್ಕೆ ಆರ್ಡರ್ ಮಾಡಿದೆ.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯದಲ್ಲರತಕ್ಕ ಇಲಗಳು ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಹಲವಾರು ರೀತಿಯಲ್ಲಿ ಹಾನಿಮಾಡುತ್ತಿರುವುದರಿಂದ ಅವಗಳನ್ನು ಕೊಲ್ಲುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ.—ಅದಕ್ಕೆ ತಾವು ಬೇರೆ ಪ್ರಶ್ನೆ ಕಳುಹಿಸಿ, ಉತ್ತರಗಳನ್ನು ಒದಗಿಸಲಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಗೋಡೌನುಗಳನ್ನು ಕಟ್ಟಿದ್ದರೂ ಕೂಡ ಅವುಗಳನ್ನು ಬಳಸದೆ ದುರುದ್ದೇಶಕ್ಕಾಗಿಯೇ ಹೀಗೆ ಒಂದು ಅವಕಾಶ ಮಾಡಿಕೊಳ್ಳಲು ಈ ರೀತಿ ಮಾಡುತ್ತಿದ್ದಾರೆ ಎಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಆ ಒಂದು ಅನುಮಾನ ಬಂದುದರಿಂದಲೇ ಈಗ ಈ ವಿಚಾರವನ್ನು ಪೂರ್ಣವಾಗಿ ವಿಚಾರಣೆ ಮಾಡಲು ವಿಜಿಲೆನ್ಸ್ ಕಮಿಷನರಿಗೆ ತಿಳಿಸಿದೆ.

Sri M. MALLAPPA.—Has the Government thought of any birth control for this rat menace in the country ?

Sri B. RACHAIAH.—It is for the scientists to find out.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಲ್ಲ ತಾವು ನಡೆಸಿರತಕ್ಕ ತನಿಖೆ ಬಹಳ ರಹಸ್ಯವಾದದ್ದು ಎಂದು ಹೇಳಿದೆ. ಇದನ್ನು ಸರ್ಕಾರ ಯಾವಾಗ ಬಹಿರಂಗ ಮಾಡುತ್ತಾರೆ ?

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಇದರ ಬಗ್ಗೆ ಒಂದು ಆಖೈರು ತೀರ್ಮಾನವನ್ನು ತೆಗೆದುಕೊಂಡಕೂಡಲೇ ಅದನ್ನು ಬಹಿರಂಗಮಾಡಲಾಗುತ್ತದೆ.

Irregular sale of Municipal Sites by President of Kadur Municipality

609. **Sri K. M. THAMMAIAH** (Kadur).—

Will the Minister of State for Municipal Administration be pleased to state :—

(*a*) whether there was an enquiry into the irregular sale of Municipal sites by the President of Kadur Municipality in 1962 ;

(*b*) if so, the action taken on the enquiry ?

Sri B. M. PATIL (Minister of State for Municipal Administration).—

(*a*) Yes.

(*b*) Action is being taken to surcharge the councillors who voted for confirmation of the irregular sale.

ಶ್ರೀ ಕೆ. ಎಂ. ತಮ್ಮಯ್ಯ.—ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ "action is being taken" ಎಂದು ಹೇಳಿದ್ದಾರೆ. ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದಿದ್ದೀರಿ ?

†ಶ್ರೀ ಬಿ. ಎಂ. ಪಾಟೀಲ್.—ಅಲ್ಲಿ ಏನೀಗ ನಿವೇಶನಗಳನ್ನು ಅಕ್ರಮವಾಗಿ ವಿಲೇವಾರಿ ಮಾಡಿದ್ದಾರೆಂದು ಹೇಳಲಾಗಿದೆ, ಆ ಸಂದರ್ಭದಲ್ಲಿ ಅಲ್ಲಿನ ಅಧ್ಯಕ್ಷರು ಒಂದು ಮೀಟಿಂಗನ್ನು ಕರೆದು ಆ ಕೌನ್ಸಿಲ್ಲಿನ ಮುಂದೆ ಆ ನಿವೇಶನಗಳ ವಿಲೇವಾರಿ ವಿಚಾರವನ್ನಿಟ್ಟು, ಅದಕ್ಕೆ ಅವರ ಒಪ್ಪಿಗೆಯನ್ನು ಪಡೆದು ಮಾರಾಟ ಮಾಡಿದ್ದಾರೆ. ಆದ್ದರಿಂದ ಆ ದಿವಸ ಆ ಮೀಟಿಂಗಿನಲ್ಲಿ ಯಾರು ಯಾರು ಹಾಜರಿದ್ದರೋ ಅವರೆಲ್ಲರ ಮೇಲೂ ಸರ್‌ಚಾರ್ಜ್ ಮಾಡುವುದಕ್ಕೆ ಸೂಚನೆ ಮಾಡಲಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅಧ್ಯಕ್ಷರು ಆ ನಿರ್ಣಯವನ್ನು ಟ್ಯಾಂಪರ್ ಮಾಡಿದ್ದಾರೆಂದು ಸರ್ಕಾರಕ್ಕೆ ದೂರನ್ನು ಕೊಟ್ಟಿದ್ದವರ ಬಗ್ಗೆ ಹೇಗೆ ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಕೌನ್ಸಿಲ್ ಮುಂದೆ ಇಟ್ಟು ಅವರ ಸಹಿ ಪಡೆದು ಅಲ್ಲಿ ಮಾರಾಟ ಮಾಡಲಾಗಿದೆ ಎಂಬುದಾಗಿ ಹೊರಪಟ್ಟಿದೆ. ಆ ದಿನ ಯಾರು ಯಾರು ಮೀಟಿಂಗಿನಲ್ಲಿದ್ದರೋ ಅವರೆಲ್ಲರ ಮೇಲೂ ಸರ್‌ಚಾರ್ಜ್ ಮಾಡಲಾಗುತ್ತಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅದು ಬಹಳ ಬೆಲೆ ಬಾಳತಕ್ಕ ಭೂಮಿ. ಅದರ ಪಕ್ಕದ ಜಮೀನು 13 ಸಾವಿರಕ್ಕೆ ಬೆಲೆಯಾಗಿದೆ. ಅಂಥ ನಿವೇಶನವನ್ನು 800 ರೂಪಾಯಿಗೆ ಅಧ್ಯಕ್ಷರು ತಮ್ಮ ಅಣ್ಣನ ಹೆಸರಿಗೆ ಮಾರಾಟ ಮಾಡಿರತಕ್ಕದ್ದು ಅಕ್ರಮ. ಹಾಗಿದ್ದರೂ ಸರ್ಕಾರದವರು ಲೈಸೆನ್ಸ್ ಮಂಜೂರು ಮಾಡಿದ್ದಾರೆ. ಅದನ್ನೂ ಕೂಡ ವಜಾ ಮಾಡಬೇಕೆಂದು ಸರ್ಕಾರಕ್ಕೆ ಅರ್ಜಿ ಕೊಟ್ಟಿರಲಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಲೈಸೆನ್ಸ್ ವಿಚಾರ ಸರ್ಕಾರದವರ ಗಮನಕ್ಕೆ ಬಂದಿರಲಿಲ್ಲ. ಅದನ್ನು ತಡೆಯಲು ನೂಕ್ಕ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಅಲ್ಲಿಯ ಚೀಫ್ ಆಫೀಸರು ಏನು ವರದಿ ಮಾಡಿದ್ದಾರೆ ?

†Indicates that remarks or speeches have not been revised by the member concerned.